ಶ್ರೀ ಹೆಚ್.ಡಿ. ದೇವೇಗೌಡ.—ನಾನು ಆ ಜಾಗದಲ್ಲಿ (ವಿರೋಧ ಪಕ್ಷದಲ್ಲಿ) ಕುಳಿತು ಕಾವೇರಿ ನದಿ ನೀರಿನ ಬಳಕೆ ಬಗ್ಗೆ ತಂದ ಖಾಸಗಿ ನಿರ್ಣಯವನ್ನು ಇಡೀ ಸದನ ಸರ್ವಾನುಮತದಿಂದ ಒಪ್ಪಿತು.

ಶ್ರೀ ಬಿ. ಬಸವಲಿಂಗಪ್ಪ.—ನಾವೂ ಒಪ್ಪಿದ್ದೇವೆ.

ಶ್ರೀ ಹೆಚ್.ಡಿ. ದೇವೇಗೌಡ.—ಈ ವಿಚಾರ ಪತ್ರಿಕೆಯಲ್ಲಿ ಬಂದಿರುವುದರಿಂದ ಹೊರಗೆ ಜನರಿಗೆ ಅಪಾರ್ಥ ಕಲ್ಪನೆಯಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಏನೂ ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ನಿಮಗೆ ಪ್ರಚಾರ ಸಿಗುವುದಾದರೆ ಹೋಗಲಿ. ಇಷ್ಟೆಲ್ಲಾ ಪಕೇಲಿ ತೆಗೆದುಕೊಂಡ ನೀವು ನಿಮಗೆ ಪ್ರಚಾರ ಸಿಗುತ್ತದೆಂದು ತಿಳಿದುಕೊಳ್ಳಬೇಡಿ. ಈ ಪತ್ರಿಕೆಯವರು ನನಗೆ ಗೊತ್ತಿದೆ. ನಿಮಗೇನೂ ಪ್ರಚಾರ ಸಿಗುವುದಿಲ್ಲ. ಏತಕ್ಕೆ ಯೋಚನೆ ಮಾಡುತ್ತೀರಿ? ನಿಮ್ಮ ಕಾಲದಲ್ಲಿ ಇದು ಆಗಬಾರದು ಎಂದು ನೋಡಿಕೊಳ್ಳಿ ಎಂದು ವಿನಂತಿ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ದೇವೇಗೌಡರು ಏನು ಹೇಳಿದರು, ಕಾವೇರಿ ನೀರಿನ ಬಗ್ಗೆ ರೆಸಲ್ಯೂಷನ್ ತಂದಿದ್ದೆ ಎಂದು ಹೇಳಿದರು. ನಾವೆಲ್ಲಾ ಅದನ್ನು ಒಪ್ಪಿದ್ದೆವು. ನಾವು ಈಗ ಪುನಃ ತರುತ್ತೇವೆ. ನೀವು ಜನತಾ ಪಕ್ಷದವರು ಅದೇ ದೊಡ್ಡ ಮನಸ್ಸಿನಿಂದ ಒಪ್ಪಿ ಎಂದು ಹೇಳುತ್ತೇನೆ.

ನಿಯಮ ೩೫೪ರ ಮೇರೆಗೆ

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ತಮ್ಮ ೩೫೪ನೇ ನೋಟೀಸನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿದ್ದೇನೆ. ಮಾನ್ಯ ಬಸವರಾಜ್ ಅವರು ೩೫೪ರ ವಿಷಯವನ್ನು ಪ್ರಸ್ತಾಪ ಮಾಡಬಹುದು.

(೧.) ಕೊಳಲಗಿರಿ ಪೆಡ್ರೂರು-ದೊಂದೇರಂಗಡಿ ರಸ್ತೆ ಮತ್ತು ಕೊಕ್ಕರಣೆ-ಸಂತೆಕಟ್ಟೆ ರಸ್ತೆಗಳಿಗೆ ಟಾರ್ ಹಾಕಿಸುವುದು

ಶ್ರೀ ಬಸವರಾಜ (ಬ್ರಹ್ಮಾವರ).—ಕಳೆದ ಅಧಿವೇಶನದಲ್ಲಿ ನನ್ನ ಕ್ಷೇತ್ರದ ಎರಡು ಮುಖ್ಯ ರಸ್ತೆಗಳಾದ ಕೊಳಲಗಿರಿ ಪೆಡ್ರೂರು-ದೊಂದೇರಂಗಡಿ ರಸ್ತೆ ಮತ್ತು ಕೊಕ್ಕರಣೆ- ಸಂತೆಕಟ್ಟೆ ರಸ್ತೆಗಳ ಉಳಿದ ಭಾಗಕ್ಕೆ ಟಾರು ಹಾಕಿಸುವ ಬಗ್ಗೆ ಮಾನ್ಯ ಸಚಿವರು ಸದನದಲ್ಲಿ ಆಶ್ವಾಸನೆ ನೀಡಿದ್ದು, ಬಜೆಟ್ಟಿನಲ್ಲಿ ಹಣ ಮಂಜೂರು ಮಾಡಲಾಗಿದೆ ಎಂದು ತಿಳಿದ್ದಾಗ್ಯೂ ಈವರೆಗೆ ಕೆಲಸ ಆರಂಭಿಸಿರುವುದಿಲ್ಲ ವಾದ್ದರಿಂದ ಈ ಕೆಲಸಗಳನ್ನು ಕೂಡಲೇ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸನ್ಮಾನ್ಯ ಸದಸ್ಯರು ಎತ್ತಿರತಕ್ಕ ವಿಷಯದ ಬಗ್ಗೆ ಸಂಪೂರ್ಣ ಪೂರ್ಣ ಮಾಹಿತಿ ಇಲ್ಲ. ಸಂಬಂಧಪಟ್ಟ ಎಲ್ಲಾ ಮಾಹಿತಿ ತರಿಸಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

(೨) ಶಿಕಾರಿಪುರ ಪುರಸಭೆಯವರು ವಿಧಿಸಿದ ಸುಂಕಕ್ಕಿಂತ ಹೆಚ್ಚಿನ ಸುಂಕವನ್ನು ವಸೂಲು ಮಾಡುತ್ತಿರುವುದು

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ಶಿಕಾರಿಪುರ ಪುರಸಭೆಯವರು ೧೯೮೫-೮೬ನೇ ಸಾಲಿಗೆ ಶಿಕಾರಿಪುರ ಸಂತೆಯಲ್ಲಿ 'ಸುಂಕ'ವನ್ನು ವಸೂಲು ಮಾಡುವ ಬಗ್ಗೆ ಹರಾಜ್ ಮೂಲಕ ಒಬ್ಬ ಕಂಟ್ರಾಕ್ಟರ್‌ದಾರರಿಗೆ ವಸೂಲಿ ಮಾಡುವ ವ್ಯವಸ್ಥೆ ಮಾಡಿದ್ದು ಕಳೆದ ಎರಡು ಮೂರು ತಿಂಗಳಿಂದ ಪುರಸಭೆಯವರು ನಿಗದಿ ಮಾಡಿರುವುದಕ್ಕಿಂತ ಹೆಚ್ಚಿನ ಸುಂಕ ವಸೂಲು ಮಾಡುತ್ತಿದ್ದು ಅದನ್ನು ಪ್ರತಿಭಟಿಸಿದ ರೈತರಿಗೆ ಕಂಟ್ರಾಕ್ಟ್‌ದಾರರ ಕಡೆಯವರು ಕೈಮಾಡಿ ಪೋಲೀಸ್ ಕಂಪ್ಲೇಂಟ್ ಸಹ ಹೋಗಿರುತ್ತದೆ. ಅದಲ್ಲದೆ ಕಂಟ್ರಾಕ್ಟ್ ಪಡೆದ ದಿವಸದಿಂದ ಈವರೆಗೆ ಕಾನೂನಿನಂತೆ ಅಗತ್ಯವಾದ ಅಗ್ರಿಮೆಂಟ್ ಸಹ ಮಾಡಿಕೊಡದೆ ೩-೪ ತಿಂಗಳ ಕಂತಿನ ಹಣವನ್ನು ಪಾವತಿ ಮಾಡದಿದ್ದರೂ ಅವರ ಮೇಲೆ ಕಾನೂನಿನಂತೆ ಕ್ರಮ ಕೈಗೊಂಡಿಲ್ಲದೆ ಸರಕಾರದ ಬೊಕ್ಕಸಕ್ಕೆ ಧಕ್ಕೆ ಆಗಿದೆ. ಈ ಹಿಂದೆ ಸಹ ಇದೇರೀತಿ ಪ್ರಕರಣಗಳು ನಡೆದಿದ್ದು ಪುರಸಭೆಗೆ ಕಟ್ಟಬೇಕಾದ ಕಂತಿನ